Government of Karnataka

Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ.ಸಿ ನಂಬರ 714/2023

ಸಿ ಡಬ್ಲ್ಯೂ-1
ಪಿ ಡಬ್ಲ್ಯೂ-1

| | | |
|---|---|---|
| ಸಾಕ್ಷಿದಾರರ ಹೆಸರು | ಃ- | ಶಾರದಾ |
| ಗಂಡನ ಹೆಸರು | ಃ- | ಶಂಕ್ರಪ್ಪ |
| ವಯಸ್ಸು | ಃ- | 36 ವರ್ಷ |
| ಉದ್ಯೋಗ | ಃ- | ಕೂಲಿ ಕೆಲಸ |
| ವಾಸಸ್ಥಳ | ಃ- | ಹಾಲಭಾವಿ ತಾಂಡ |

**ದಿ.22-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

***ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ.***

ಚಾ.ಸಾ-2 ಮತ್ತು 3 ನಮ್ಮೂರಿನವರು ಪರಿಚಯ ಇದೆ. ಚಾ.ಸಾ-4 ಮತ್ತು 5 ನನ್ನ ತಮ್ಮಂದಿರು. ಚಾ.ಸಾ-6 ನನ್ನ ಮಗಳು. ಚಾ.ಸಾ-7 ನನ್ನ ಚಿಕ್ಕಪ್ಪ. ಚಾ.ಸಾ-8 ನನ್ನ ತಾಯಿ. 1ನೇ ಆರೋಪಿ ನನ್ನ ಮಾವ. 2ನೇ ಆರೋಪಿ ಮೃತಪಟ್ಟಿರುತ್ತಾನೆ. 3ನೇ ಆರೋಪಿ ನನ್ನ ಮಾವ. 4 ರಿಂದ 11 ನೇ ಆರೋಪಿತರು ನಮ್ಮ ಸಂಬಂಧಿಕರು.

ಸುಮಾರು 3 ವರ್ಷಗಳ ಹಿಂದೆ ಬೆಳಿಗ್ಗೆ 8-00 ಗಂಟೆಗೆ ನನ್ನ ಗಂಡನಿಗೆ ಬರಬೇಕಾದ ಆಸ್ತಿಯನ್ನು ಕೊಡಬೇಕು ಎಂದು ಹಿರಿಯರಿಗೆ ಕರೆಯಬೇಕು ಎಂದು ನಮ್ಮ ಮನೆಯ ಮುಂದೆ ಇದ್ದಾಗ ಎಲ್ಲಾ ಆರೋಪಿತರು ಗುಂಪು ಕಟ್ಟಿಕೊಂಡು ಬಂದು ನನಗೆ ಬೋಸೂಡಿ, ಸೂಳೆ ಎಂದು ಅವಾಚ್ಯವಾಗಿ ಬೈದಿರುತ್ತಾರೆ. ನಂತರ ನನಗೆ ಲೇ ನಿನಗೆ ಬಾಗ ಕೊಡುವದಿಲ್ಲ ಎಲ್ಲಿಗೆ ಹೋಗುತ್ತಿಯಾ ಹೋಗು ಎಂದು 1ನೇ ಆರೋಪಿ ಬೈದು ನನ್ನ ಸೀರೆ ಹಿಡಿದು ಎಳೆದಾಡಿ ಕಬ್ಬಿಣದ ರಾಡಿನಿಂದ ಹೊಡೆದಿರುತ್ತಾನೆ. ನಂತರ ಲಕ್ಷ್ಮೀಬಾಯಿ, ರೇಣುಕಾ ಮತ್ತು ರೇಣುಕಾಬಾಯಿ ರವರು ಬಂದು ನನ್ನ ಕೂದಲು ಹಿಡಿದು ಎಳೆದಾಡಿ ಕೈಗಳಿಂದ ಹೊಡೆದಿರುತ್ತಾರೆ. ಆಗ ಚಾ.ಸಾ-4 ಮತ್ತು 5 ರವರು ಜಗಳ ಬಿಡಿಸಲು ಬಂದಿರುತ್ತಾರೆ. ಅವರಿಗೆ 1ನೇ ಆರೋಪಿ ಚಾ.ಸಾ-5 ರವರಿಗೆ ಕೈ ಮುಷ್ಟಿ ಮಾಡಿ ಹೊಡೆದಿರುತ್ತಾನೆ. ಅದೇ ರೀತಿ ಚಾ.ಸಾ-4 ರವರಿಗೆ 1ನೇ ಆರೋಪಿ ಕಟ್ಟಿಗೆಯಿಂದ ಹೊಡೆದಿರುತ್ತಾನೆ. ಚಾ.ಸಾ-6 ರವರಿಗೆ 8ನೇ ಆರೋಪಿ ಕೈಯಿಂದ ಹೊಡೆದಿರುತ್ತಾಳೆ. ಚಾ.ಸಾ-7 ಮತ್ತು 8 ರವರು ಬಂದು ಜಗಳ ಬಿಡಿಸಿರುತ್ತಾರೆ. ನಂತರ ಪೋಲಿಸ್ ಠಾಣೆಗೆ ಹೋಗಿ ದೂರು ಕೊಟ್ಟಿರುತ್ತೇನೆ. ಸಾಕ್ಷಿ

ದೂರಿನ ಮೇಲಿರುವ ತನ್ನ ಹೆಬ್ಬೆಟ್ಟಿನ ಗುರುತು ನೋಡಿ ಗುರುತಿಸಿದ್ದು ದೂರನ್ನು ನಿ.ಪಿ-1 ಎಂದು ಗುರುತಿಸಲಾಯಿತು. ಎಫ್.ಐ.ಆರ್ ಮೇಲಿರುವ ತನ್ನ ಹೆಬ್ಬೆಟ್ಟಿನ ಗುರುತು ನೋಡಿ ಗುರುತಿಸಿದ್ದು ಪ್ರಥಮ ವರ್ತಮಾನ ವರದಿಯಯನ್ನು ನಿ.ಪಿ-2 ಎಂದು ಗುರುತಿಸಲಾಯಿತು. ದೂರು ಕೊಟ್ಟ ಮರುದಿನ ಪೋಲಿಸರು ನಮ್ಮ ಮನೆಯ ಮುಂದೆ ಪಂಚನಾಮೆ ಮಾಡಿ ಒಂದು ಕಟ್ಟಿಗೆ ಮತ್ತು ಒಂದು ಕಬ್ಬಿಣದ ರಾಡನ್ನು ತೆಗೆದುಕೊಂಡು ಬಂದಿರುತ್ತಾರೆ. ಜಾಗವನ್ನು ನಾನೇ ತೋರಿಸಿರುತ್ತೇನೆ. ಪಂಚನಾಮೆಯನ್ನು 8-30 ಕ್ಕೆ ಮಾಡಿರುತ್ತಾರೆ. ಪಂಚನಾಮೆಯನ್ನು ನಿ.ಪಿ-3 ಎಂದು. ಪೋಟೋವನ್ನು ನಿ.ಪಿ-4 ಎಂದು ಗುರುತಿಸಲಾಯಿತು. ಕಟ್ಟಿಗೆ ಮತ್ತು ಕಬ್ಬಿಣದ ರಾಡನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮುದ್ದೇಮಾಲು-1 ಮತ್ತು 2 ಎಂದು ಗುರುತಿಸಲಾಯಿತು. ನಂತರ ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ.

**ಪಾಟೀ ಸವಾಲು ಶ್ರೀ ಎಸ್.ಆರ್.ಆರ್ ವಕೀಲರಿಂದ : -**

ನನ್ನ ಗಂಡ ತೀರಿಕೊಂಡು 6 ತಿಂಗಳು ಆಗಿರುತ್ತದೆ. ನನ್ನ ಗಂಡ ಮದುವೆ ಆಗುವದಕ್ಕಿಂತ ಮುಂಚೆ 1ನೆ ಆರೋಪಿಯ ಜೊತೆ ಬೇರೆಯಾಗಿದ್ದ ಎಂದರೆ ಸರಿ. ದೂರನ್ನು ಪೋಲಿಸರು ಠಾಣೆಯಲ್ಲಿ ಬರೆದಿರುತ್ತಾರೆ. ದೂರಿನಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಪೋಲಿಸರು ದೂರು ಬರೆದ ಮೇಲೆ ನನಗೆ ತಿಳಿಸಿರುತ್ತಾರೆ. ಪಾಂಡಪ್ಪ ನನಗೆ ಬಡೆದಿದ್ದಾರೆ ಮತ್ತು ಎಲ್ಲಾ ಆರೋಫಿತರು ನನಗೆ ಬಡೆದಿದ್ದಾರೆ ಎಂದು ಬರೆದಿರುತ್ತಾರೆ. ನನ್ನ ಗಂಡ ಇದ್ದಾಗಿನಿಂದಲೂ ಸಹ ನಮಗೂ ಮತ್ತು 1ನೇ ಆರೋಪಿಗೆ ಸರಿ ಇರಲಿಲ್ಲ ಎಂದರೆ ಸರಿ. 1ನೇ ಆರೋಪಿ ನನ್ನ ಗಂಡನೊಂದಿಗೆ ಬೇರೆಯಾದ ನಂತರ 4 ಎಕರೆ ಜಮೀನನ್ನು ಖರೀದಿ ಮಾಡಿ ತಾಯಿಯ ಹೆಸರಿಗೆ ಮಾಡಿಸಿದ್ದ ಎಂದರೆ ಸರಿಯಲ್ಲ. ಆ ಆಸ್ತಿಯಲ್ಲಿ ಪಾಲು ಬೇಕು ಎಂದು ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಸಿವಿಲ್ ದಾವೆ ಹಾಕಿರುತ್ತೇನೆ ಎಂದರೆ ಸರಿ. ನನ್ನ ಗಂಡ ಇದ್ದಾಗ 2 ಎಕರೆ ಹೊಲವನ್ನು 1ನೇ ಆರೋಪಿ ನನ್ನ ಹೆಸರಿಗೆ ಮಾಡಿಸಿ ಕೊಟ್ಟಿದ್ದಾನೆ ಎಂದರೆ ಸರಿ. ಜಗಳವು ಮುಂಜಾನೆ 7-00 ಗಂಟೆಗೆ ಆಗಿರುತ್ತದೆ. ನಾನು ಪೋಲಿಸ್ ಠಾಣೆಗೆ ಅದೇ ದಿನ ಬೆಳಿಗ್ಗೆ 7-00 ಗಂಟೆಗೆ ಹೋಗಿರುತ್ತೇನೆ. ದೂರಿನಲ್ಲಿ ಎಲ್ಲಿ ಜಗಳ ಆಗಿದೆ ಎಂದು ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿ ನನಗೆ ಸೀರೆ ಹಿಡಿದು ಎಳೆದಾಡಿಲ್ಲ ಹಾಗೂ ಆರೋಫಿತರು ನನಗೆ ಕಬ್ಬಿಣದ ರಾಡಿನಿಂದ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿತರು ನನಗೆ ಯಾವುದೇ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಚಾ.ಸಾ-4 ಮತ್ತು 5 ರವರಿಗೆ ಆರೋಪಿತರು ಯಾವುದೇ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಆಸ್ತಿಯ ಸಲುವಾಗಿ ಆರೋಪಿತರ ವಿರುದ್ದ

ಸುಳ್ಳು ಕೇಸು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ..
ಲಿಂಗಸಗೂರು.